

ನನಗೆ ನಾನೇ ಸಾಕು ಎನ್ನುವವರ ದಾಂಪತ್ಯ ಹೇಗಿರಬಹುದು?

ಡಾ.ವಿನೋದ ಛೆಬ್ಬಿ

# 29: ಏಕಾಂಗಿಭಾವದವರ ದಾಂಪತ್ಯ

ಹೋದಸಲ ನಿಮಗೆ ಆತಂಕ ಭಾವದ ವ್ಯಕ್ತಿಯನ್ನು ಪರಿಚಯ ಮಾಡಿಸಿದ್ದೆ. ಈಸಲ ಇನ್ನೊಬ್ಬ ಕಥಾನಾಯಕನನ್ನು ಪರಿಚಯ ಮಾಡಿಸುತ್ತಿದ್ದೇನೆ– ಹಾಗಂತ ಇವನು ನನ್ನನ್ನು ಹುಡುಕಿಕೊಂಡೇನೂ ಬರಲಿಲ್ಲ. ಇವನ ಹೆಂಡತಿ ಇವನನ್ನು ಕರೆದುಕೊಂಡು ವಿದೇಶದಿಂದ ಬಂದಿದ್ದಳು. ಮದುವೆಯಾಗಿ ಮೂರು ವರ್ಷಗಳಾಗಿವೆ. ಆದರೆ ಹೆಂಡತಿಯೊಡನೆ ಈತನಿಗೆ ಎಳ್ಳಷ್ಟೂ ಆಕರ್ಷಣೆ ಇಲ್ಲ. ಮನಸ್ಸು ಬಿಚ್ಚಿ ಮಾತುಕತೆಯೂ ಇಲ್ಲ. ಒಂದುಸಲವೂ ಸಂಭೋಗವಾಗಿಲ್ಲ. ಮೊದಲೆರಡು ವರ್ಷ ಆಕೆ ಜಗಳ ಆಡೀ ಆಡೀ ಇವನಿಗೆ ಅರ್ಥಮಾಡಿಸಿರುವುದರಿಂದ ಇವನಿಗೆ ತನಗೇನೋ ಸಮಸ್ಯೆ ಇದೆ ಎಂದು ಅರ್ಥವಾಗಿದೆಯೇ ಹೊರತು ಏನು ಸಮಸ್ಯೆಯಿದೆ ಎಂದು ಅರ್ಥವಾಗಿಲ್ಲ. ಇವನನ್ನು ಮುಟ್ಟಿದರೆ ಸಾಕು, ಆಮೆಯಂತೆ ತನ್ನೊಳಗೆ ಸೇರಿಕೊಂಡು ಬಿಡುತ್ತಾನೆ ಎಂದು ಆಕೆಯ ಅಹವಾಲು. ಇವನ ಬಗೆಗೆ ತಿಳಿಯೋಣ.

ಇವನು ಏಕೈಕ ಸಂತಾನ. ಇವನಪ್ಪ ಪ್ರಸಿದ್ಧ ಸಂಶೋಧನಾ ಸಂಸ್ಥೆಯಲ್ಲಿ ಮುಖ್ಯ ಪ್ರಾಧ್ಯಾಪಕ. ಅಮ್ಮ ಹೆಸರಾಂತ ವೈದ್ಯೆ. ಭಾವುಕ ವ್ಯಕ್ತಿಗಳು ಹುಚ್ಚರೆಂದು ಅವಳ ಅನಿಸಿಕೆ. ಎದೆಹಾಲು ಕುಡಿಸಿದರೆ ಮೈಮಾಟ ಹಾಳಾಗುವುದೆಂದು ಆಕೆಯ ನಂಬಿಕೆ. ಮಕ್ಕಳಿಂದ ತನ್ನ ವೈಯಕ್ತಿಕ ಸ್ವಾತಂತ್ರ್ಯವು ಮೊಟಕಾಗುವುದು ಆಕೆಗೆ ಬೇಕಿರಲಿಲ್ಲ. ಹಾಗಾಗಿ ಆಕೆ ಈ ಶಿಶುವನ್ನು ಮೊದಲಿನಿಂದಲೂ ಅಷ್ಟಾಗಿ ಹಚ್ಚಿಕೊಳ್ಳದೆ ದೂರವಿಟ್ಟಳು. ಇದರಿಂದ ನಮ್ಮ ಈ ಕಂದನಿಗೆ ಅಮ್ಮನ ಅಮೃತಮಯ ಸ್ತನ್ಯಪಾನವಾಗಲೀ ಬೆಚ್ಚಗಿನ ಮಡಿಲ ಸ್ಪರ್ಶವಾಗಲೀ ಸಿಗದೆ ಬಾಟಲ್‌ಹಾಲು ಕುಡಿದು ತೊಟ್ಟಿಲಲ್ಲೇ ಮಲಗುವ ಹಾಗಾಯಿತು. ಅತ್ತೂ ಅತ್ತೂ ಸುಸ್ತಾದರೂ ಕೇಳುವವರು ಯಾರೂ ಇಲ್ಲವಾಯಿತು. ಕಿರಿಕಿರಿ ಮಾಡುವ ಮಗುವನ್ನು ಕಂಡರೆ ತಾಯಿಗೇ ಹೆಚ್ಚು ಕಿರಿಕಿರಿಯಾಗಿ ನಿಷ್ಕರುಣಿ ನರ್ಸ್ ಕೈಗೆ ಅದನ್ನು ಒಪ್ಪಿಸಲಾಗುತ್ತಿತ್ತು. ಅಂಬೆಗಾಲು ಇಡುವ ಮಗುವಿನ ಸುತ್ತಲೂ ವಿದೇಶಿ ಆಟಿಕೆಗಳನ್ನು ಹರಡಲಾಗುತ್ತಿತ್ತು. ಹೊಟ್ಟೆ, ಬಟ್ಟೆ, ಚಡ್ಡಿ ಇಷ್ಟು ನೋಡಿಕೊಂಡರೆ ಕರ್ತವ್ಯ ಮುಗಿಯಿತು ಎನ್ನುವ ಹಿರಿಯರ ನಡುವೆ ಹಸುಗೂಸು ಬೆಳೆಯಲು ಶುರುವಾಯಿತು. ಮಗುವಿಗೆ ಪ್ರೀತಿ ಕೊಡುವ, ಎತ್ತಿ ಆಡಿಸುವ ಕೆಲಸ ಯಾರಿಗೂ ಹಿಡಿಸಲಿಲ್ಲ. ಮುದ್ದಿಸಿದರೆ ಹಾಳಾಗುತ್ತಾರೆ, ಅತ್ತಾಗಲೆಲ್ಲ ಎತ್ತಿಕೊಂಡರೆ ಪರಾವಲಂಬನೆಗೆ ಪಾಯವೆಂದು ಎತ್ತಿಕೊಳ್ಳುವ ಅಭ್ಯಾಸ ಹಾಕಲೇ ಇಲ್ಲ– ಕೆಳಗೆ ಬಿದ್ದಾಗಲೂ. ಹಾಗಾಗಿ ಅತ್ತೂ ಅತ್ತೂ ತನ್ನಷ್ಟಕ್ಕೆ ತಾನೇ ಸುಮ್ಮನಾಗುವ, ತನ್ನ ಕಾಲಮೇಲೆ ತಾನೇ ನಿಂತುಕೊಳ್ಳುವ ಒಂಟಿತನದ ರೂಢಿ ಈ ಮಗುವಿಗೆ ಬಿತ್ತು.

ಇಷ್ಟೆಲ್ಲ ನಡೆಯುವಾಗ ಮಗುವಿನ ಅಂತರಾಳದೊಳಗೆ ಏನು ನಡೆಯುತ್ತಿತ್ತು? ನನಗೆ ಯಾವ ಮುಖವೂ ಕಾಣುತ್ತಿಲ್ಲ. ಯಾವ ಕಣ್ಣುಗಳೂ ನನ್ನನ್ನು ನೋಡುತ್ತಿಲ್ಲ. ಯಾವ ಬೆಚ್ಚಗಿನ ಸ್ಪರ್ಷವೂ ನನಗೆ ತಾಗುತ್ತಿಲ್ಲ. ಅಯ್ಯೋ, ನನಗಿದೆಲ್ಲ ಬೇಕು! ಅದಕ್ಕೆ ಅಳಬೇಕು, ಚೆನ್ನಾಗಿ ಅಳಬೇಕು... ಗಂಟಲು ಹರಿಯುವಂತೆ ಅತ್ತರೂ ಯಾರೂ ಕೇಳುತ್ತಿಲ್ಲ. ಎಂಥ ಗತಿ ಬಂತು ನನಗೆ! ನನಗೆ ಹಚ್ಚಿಕೊಳ್ಳಲಿಕ್ಕೆ ಯಾರಾದರೂ ಸಿಗಲೇಬೇಕು. ಆದರೆ ಸಿಗುತ್ತಿಲ್ಲವಲ್ಲ? ಇನ್ನೇನು ಮಾಡುವುದು, ನನ್ನ ಭಾವನೆಗಳನ್ನು ಕಟ್ಟಿಡಬೇಕು. ನನ್ನನ್ನು ನಾನೇ ನೋಡಿಕೊಳ್ಳಬೇಕು. ನನಗೆ ನಾನೇ ಗತಿ. ಕೈಗೆ ಸಿಕ್ಕಿದ್ದಕ್ಕೇ ಮನಸ್ಸು ಕೊಡಬೇಕು – ಆಟಿಕೆಗಳಲ್ಲದೇ ಇನ್ನೇನಿದೆ? ಯಾರನ್ನೂ ಸ್ಪಂದಿಸುವುದಕ್ಕೆ ಕೇಳಬಾರದು. ಅವರು ತಿರಸ್ಕರಿಸಿದರೆ ಹೆಚ್ಚು ನೋವಾದೀತು. ಕೈಲಾಗದಿದ್ದರೂ ಇಷ್ಟವಿಲ್ಲದಿದ್ದರೂ ಸ್ವತಂತ್ರನಾಗಿ ಸ್ವಾವಲಂಬಿಯಾಗಿ ಬದುಕಬೇಕು – ಈ ಭಾವನೆಗಳನ್ನು ತೋರಿಸುವ ಗೊಡವೆಯೇ ಬೇಡ. ತೋರಿಸಿದರೆ ಯಾರೂ ಸ್ಪಂದಿಸುವುದಿಲ್ಲ. ನಿರುತ್ಸಾಹಿ ನಿರ್ಜೀವ ಆಟಿಕೆಗಳೇ ನನ್ನ ಸಂಗಾತಿ.

ಅಪ್ಪನಿಗೆ ಮಗ ವಿಜ್ಞಾನಿಯಾಗಿ ತನಗಿಂತ ಮಹತ್ತರ ಸಾಧನೆ ಮಾಡಬೇಕೆಂಬ ಆಕಾಂಕ್ಷೆ. ತಾಯಿಗೆ ಅವನು ಹಾಗೆ ಮಾಡದಿದ್ದರೆ ತನ್ನ ಮಗನೇ ಅಲ್ಲ ಎಂಬ ತ್ಯಾಜ್ಯ ಧೋರಣೆ. ಹೀಗೆ ಮಗುವನ್ನು ಮಗುವಿನಂತೆ ಕಾಣದೆ ಮೋಳೆಯುತ್ತಿರುವ ಸಾಧಕನನ್ನಾಗಿ ಕಂಡರು. ತಮ್ಮ ಅಪೇಕ್ಷೆ– ನಿರೀಕ್ಷೆಗಳನ್ನು, ಶಿಸ್ತನ್ನು ಅವನ ಮೇಲೆ ಹೇರಿದರು. ಬಾಲ್ಯದಿಂದಲೇ ಶ್ರೇಷ್ಠ ಶಿಕ್ಷಣ ಸಂಸ್ಥೆಗಳು, ಉತ್ಕೃಷ್ಟ ಶಿಕ್ಷಕರು, ಕಂಪ್ಯೂಟರ್ ತರಬೇತಿ ಇತ್ಯಾದಿ ಉಂಡ. ಸ್ನೇಹಿತರೊಡನೆ ಆಟವಾಡಲು ಆಸ್ಪದವೇ ಇರಲಿಲ್ಲ. ಯಾಕೆ? ಆಟವೆಂದರೆ ಸಮಯ ಹಾಳು, ಹಾಗೂ (ಕೆಳದರ್ಜೆಯ) ಮಕ್ಕಳ ಜೊತೆಗೆ ಬೆರೆತರೆ ಭವಿಷ್ಯ ಹಾಳು ಎಂದು ಹೆತ್ತವರ ನಂಬಿಕೆ. ಹಾಗಾಗಿ ನಮ್ಮ ಹುಡುಗ ಒಂಟಿಯಾಗಿಯೇ ಬೆಳೆದ. ಪುಸ್ತಕಗಳು ಹಾಗೂ ಕಂಪ್ಯೂಟರ್ ಮಾತ್ರ ಇವನ ಸಂಗಾತಿಯಾದುವು. ಹೆತ್ತವರ ಕನಸನ್ನು ನನಸಾಗಿ ಮಾಡುವ ಭರದಲ್ಲಿ ಅವನಿಗೆ ಸರೀಕರ ಸಾಮಾಜಿಕ ಸಂಗ, ಬೀದಿ ಸುತ್ತಾಟ, ಬೆರಗುಗಣ್ಣಿನ ಅನ್ವೇಷಣೆ ಮುಂತಾದ ತನ್ನ ಚಿಕ್ಕ ಕನಸುಗಳನ್ನು ಭಗ್ನಗೊಳಿಸಬೇಕಾಗಿ ಬಂತು. ಪರಿಣಾಮ? ಬುದ್ಧಿಯಿಂದ ದೈತ್ಯನಾಗಿ ವಿದೇಶದಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದರೂ ಭಾವನೆಗಳಲ್ಲಿ ಕುಬ್ಜನಾಗಿಯೇ ಉಳಿದ.

ಒಂದು ಪ್ರಸಂಗ ಇವನ ಮನಸ್ಸಿನಲ್ಲಿ ಇನ್ನೂ ಹಸಿಯಾಗಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯಕ್ಕೆ ಮೊದಲ ಹತ್ತರಲ್ಲಿ ಒಬ್ಬನಾಗಬೇಕೆಂದು ಅಪ್ಪನ ಜಬರುದಸ್ತಿನ ಆಣತಿ. ಇವನು 13ನೆಯವನಾಗಿ ಬಂದಾಗ ಅಪ್ಪ ಇವನನ್ನು ಅಭಿನಂದಿಸುವುದು ಒತ್ತಟ್ಟಿರಲಿ, ಶಿಕ್ಷಿಸಲಿಕ್ಕೋಸ್ಕರ ಮುಂಬರುವ ಇವನ ಹುಟ್ಟುಹಬ್ಬದ ಆಚರಣೆಯನ್ನು ರದ್ದುಪಡಿಸಿದ. ಭಾವನೆ ಸತ್ತುಹೋದ ಇವನಿಗೆ ಪ್ರತಿಭಟಿಸಲೂ ಆಗಲಿಲ್ಲ.

ಇವನ ವಿಚಾರಧಾರೆ ಹೇಗಿರಬಹುದು? ಈ ಜಗತ್ತು ನಂಬಲರ್ಹವಾದ ಜಾಗವಲ್ಲ. ಹಾಗಾಗಿ ನನ್ನದೇ ಆದ ಜಗತ್ತನ್ನು ನಿರ್ಮಿಸಿಕೊಂಡಿದ್ದೇನೆ. ಇಲ್ಲಿ ನಾನು ಏಕಾಂಗಿ. ನನ್ನ ಹೊರತಾಗಿ ಯಾರೂ ಇಲ್ಲ. ಇಲ್ಲಿ ನೋವು ಕೊಡುವವರು, ತಿರಸ್ಕರಿಸುವವರು ಯಾರೂ ಇಲ್ಲ. ಯಾರ ಅಗತ್ಯವೂ ನನಗಿಲ್ಲ. ನಾನು ಯಾರಮೇಲೂ ಅವಲಂಬಿಸಲು ಒಪ್ಪಲಾರೆ. ಸ್ವತಂತ್ರನಾಗಿ ಇರುವುದು ನನ್ನ ಅನಿವಾರ್ಯತೆ. ಇದೇ ಸುರಕ್ಷಿತ. ನನ್ನ ಸಂಗಾತಿಗಳೆಂದರೆ ಪುಸ್ತಕಗಳು ಹಾಗೂ ಕಂಪ್ಯೂಟರ್. ನಾನು ಹೊರಜಗತ್ತಿನ ಇತರರ ಭಾವನೆಗಳಿಗೆ ಸ್ಪಂದಿಸುವ ಅಗತ್ಯವಿಲ್ಲ. ನನಗೆಲ್ಲ ಸಿಗದಿದ್ದರೂ ಸಿಕ್ಕಷ್ಟೇ ಸಾಕು.

ಇವನು ದಾಂಪತ್ಯದಲ್ಲಿ ಹೇಗಿದ್ದಾನೆ? ಇವನಿಗೆ ಸಂಗಾತಿಯೇ ಬೇಡ. ಹಾಗಾದರೆ ಮದುವೆ ಯಾಕಾದ? ಹಿರಿಯರ ಆಜ್ಞೆಯಂತೆ ಅಷ್ಟೆ. ಹಾಗಾಗಿ ಸಂಗಾತಿಯೊಡನೆ ಭಾವನಾಹೀನ. ಹೆಂಡತಿಯ ಹತ್ತಿರವಾದಾಗ ನಿಷ್ಕ್ರಿಯತೆ ತೋರುತ್ತಾನೆ– ಪ್ರೀತಿ ಬಯಸಿ ತಿರಸ್ಕೃತನಾದರೆ? ಗುಮ್ಮನಗುಸಕ (**passive aggressive**) ಸ್ವಭಾವ ಎದ್ದುಕಾಣುತ್ತಿದೆ. ಮೇಲುನೋಟಕ್ಕೆ ಒಪ್ಪಿದರೂ ತನಗೆ ಇಷ್ಟವಿಲ್ಲದಿರುವುದಕ್ಕೆ ಒಳಗೊಳಗೇ ಪ್ರತಿರೋಧ. ಯಾವುದೇ ಕೆಲಸದಲ್ಲಿ ಉತ್ಸಾಹವಿಲ್ಲ– ಮುಂದೆ ಹಾಕುವುದರಲ್ಲಿ ನಿಷ್ಣಾತ. ಉತ್ತರ ಕೇಳಿದರೆ ತತ್ತರ. ಅನ್ಯೋನ್ಯತೆಯ ಬಯಕೆ ಮುಂದಿಟ್ಟಾಗ ದೂರ ಉಳಿಯುತ್ತಾನೆ. ಮುಟ್ಟಿದರೆ ಮುನಿ. ಅದೇಕೆಂಬ ಅರಿವೂ ಅವನಿಗೆ ಇದ್ದಂತಿಲ್ಲ. ಕಾಮಾಸಕ್ತಿ ಇದೆ. ಒಬ್ಬನೇ ಹಸ್ತಮೈಥುನ ಮಾಡಿಕೊಳ್ಳುತ್ತಾನೆ– ಆದರೆ ಹೆಂಡತಿಯೊಡನೆ ಹಂಚಿಕೊಳ್ಳುವುದಿಲ್ಲ. (ಅಂದಹಾಗೆ ಅವನನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಅವನಿಗಿಷ್ಟವಾದ ಸಿಹಿತಿಂಡಿಯನ್ನು ತಟ್ಟೆತುಂಬ ತಂದಿಟ್ಟೆ. ಅವನು ಮಗುವಿನ ಅರಳಿದ ಕಣ್ಣುಗಳಿಂದ ನಿಧಾನವಾಗಿ ಒಬ್ಬನೇ ತಿಂದು ಮುಗಿಸಿದ. ಪಕ್ಕದಲ್ಲಿದ್ದ ಹೆಂಡತಿಯನ್ನಾಗಲೀ ನನ್ನನ್ನಾಗಲೀ ಪಾಲುಗೊಳ್ಳಲು ಕರೆಯಲಿಲ್ಲ!)

ಇವನ ಭಾವನಾ ತಾತ್ಪರ್ಯ? ನಾನು ಸರಿಯಾಗಿದ್ದೇನೆ, ನೀನು ಸರಿಯಾಗಿಲ್ಲ. ಯಾವುದೂ ನಂಬಲರ್ಹವಲ್ಲ – ನನ್ನೊಬ್ಬನ ಹೊರತಾಗಿ.

(ಅಂದಹಾಗೆ ಮಗನ ಚಿಕಿತ್ಸೆಗೆ ಸಹಾಯಕ್ಕಾಗಿ ಅಮ್ಮನನ್ನು ಹಲವು ಸಲ ಕರೆದಾಗ ಒಂದೇ ಒಂದು ಸಲ ಬಂದಳು. ಸಂಬಂಧವಿಲ್ಲದಂತೆ ಕುಳಿತಳು. ಮಗನ ಸಂಭೋಗರಹಿತ ದಾಂಪತ್ಯದ ಬಗೆಗೆ ಏನೆನ್ನಿಸುತ್ತದೆ ಎಂದಾಗ ಆಕೆಯ ಪ್ರತಿಕ್ರಿಯೆ? ಇವನು ಸಮಾಜದೆದುರು ನನ್ನನ್ನು ತಲೆ ತಗ್ಗಿಸುವ ಹಾಗೆ ಮಾಡಿಬಿಟ್ಟ!)

ಪ್ರೀತಿಸುವವರಿದ್ದರೂ ಏಕಾಂಗಿಯಾದದ್ದು ಹೀಗೆ!

**ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಬೆಳಿಗ್ಗೆ 11ರಿಂದ ಸಂಜೆ 5ರ ತನಕ ಕರೆಮಾಡಿ.**
**ಲೇಖಕರ ವಿಳಾಸ: www.medisex.org**